

ಪಾಪು ಹಾಗೆ ನಗು ಅದರದ್ದು, ಇನ್ನೇನು ಅದನ್ನು ಮುಟ್ಟಬೇಕು ನಮ್ಮ ಜನ್ನು ಅಷ್ಟರಲ್ಲೇ ಸಾಂತು ಪೊರ್ಬುಗಳು 'ಲವೀನಾ, ಬೇಬಿ...' ಅಂತ ಕರೆಯುತ್ತಾ ಒಳ ಬಂದರು. ಮೊದಲವರ ಕಣ್ಣಿಗೆ ಬಿದ್ದದ್ದು ದೊಡ್ಡ ಕಣ್ಣಿನ ಬೆರಗಾಗಿ ಅವರನ್ನು ನೊಡುತ್ತಿರುವ ಜನ್ನು!

'ಅರೇ ಪುಟ್ಟಣ್ಣ, ಅದೇನೋ ಇವತ್ತು ನಮ್ಮನೆಗೆ ಬಂದಿದ್ದು? ಅಮ್ಮ ಹತ್ತಿರ ಹೇಳಿ ಬಂದಿದ್ದೀಯಾ?, ಲವೀನಾ?' ಎಂದು ಅವಳ ಕಡೆ ತಿರುಗಿದವರು ಒಂದರೆಗಳಿಗೆ ಕಲ್ಲಾದರು. ಅವಳು ಜನ್ನುವನ್ನು ನೋಡುತ್ತಿರುವ ಪರಿ, ಧಾರಾಕಾರವಾಗಿ ಸುರಿಯುತ್ತಿದ್ದ ಕಣ್ಣೀರ ಕಂಡು ಅವಳ ಪರಿಸ್ಥಿತಿ ಅರ್ಥವಾಗಿ ಹೊಟ್ಟೆಯಲ್ಲಿ ವಿಚಿತ್ರ ಸಂಕಟವಾದಂತಾಯಿತು. ಅವಳ ಕಡೆ ನಡೆದು ತಲೆ ನೇವರಿಸಿ, 'ಲವೀನಾ, ಬೇಬಿ... ಇವತ್ತು ಮಾರ್ಕೇಟ್ ಅಲ್ಲಿ ಇಷ್ಟೇ ಬಂಗುಡೆ ಮೀನು ಸಿಕ್ಕಿದ್ದು, ಏಳಮ್ಮಾ, ಏಳು... ಮಗು ಮುಂದೆ ಅತ್ತರೆ ಅವಂಗೆ ಗಾಬರಿ ಆಗ್ತದಲ್ಲಾ ಮಗಳೇ?' ಎಂದು ಅವಳ